ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ

ನ್ಯಾಯಾಲಯ., ಪಿರಿಯಾಪಟ್ಟಣ.

**ಸಿ.ಸಿ.615/2023**

ಪಿರ್ಯಾದುದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿಗಳು **:1.** ಪುಟ್ಟರಾಜು,
ಬಿನ್ ದಾಸೇಗೌಡ,
ವಯಸ್ಸು 40 ವರ್ಷ,

**2.** ಸಚಿನ್,
ಬಿನ್ ಪುಟ್ಟರಾಜು
ವಯಸ್ಸು 22 ವರ್ಷ,

**3.** ಮಿಥುನ್,
ಬಿನ್ ಪುಟ್ಟರಾಜು
ವಯಸ್ಸು 20 ವರ್ಷ,

**4.** ರವಿ,
ಬಿನ್ ದಾಸೇಗೌಡ,
ವಯಸ್ಸು 43 ವರ್ಷ,

**5.** ಯೋಗೇಶ,
ಬಿನ್ ರವಿ,
ವಯಸ್ಸು 25 ವರ್ಷ,

**6.** ಕಾಂತರಾಜು,
ಬಿನ್ ದಾಸೇಗೌಡ
ವಯಸ್ಸು 38 ವರ್ಷ,

**7.** ಲೋಕೇಶ,
ಬಿನ್ ದಾಸೇಗೌಡ
ವಯಸ್ಸು 39 ವರ್ಷ,

**8.** ವೆಂಕಟೇಶ್,
ಬಿನ್ ಲೇ.ಮಾದೇಗೌಡ,
ವಯಸ್ಸು 26 ವರ್ಷ,

**9.** ಜಗದೀಶ,
ಬಿನ್ ಪಾಪೇಗೌಡ,
ವಯಸ್ಸು 36 ವರ್ಷ,

ಆರೋಪಿಗಳ ವಾಸಃ
ನಿಲಂಗಾಲ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

<u>ದೋಷಾರೋಪಣೆ</u>

ಶ್ರೀ ಯೋಗೇಶ.ಎಂ.ಆರ್, ಬಿ.ಎ.,ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆಃ-

ಮೊದಲನೇಯದಾಗಿ, ದಿನಾಂಕ 20.02.2023 ರಂದು ಸಂಜೆ 5.20 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಿಲಂಗಾಲ ಗ್ರಾಮದ ಸರ್ವೇ ನಂ.04/8ರ ಜಮೀನಿನಲ್ಲಿ ತಿರುಗಾಡಲು ತೊಂದರೆ ಕೊಡುತ್ತಿರುತ್ತಾರೆಂದು, 1 ರಿಂದ 9ನೇ ಆರೋಪಿಗಳು ಚಾಸಾ.1 ಸುರೇಶ ರವರ ಕುಟುಂಬದವರ ಮೇಲೆ ದ್ವೇಷ ಇಟ್ಟುಕೊಂಡು, ಚಾಸಾ.1 ರವರ ಕುಟುಂಬದವರ ಮೇಲೆ ಗಲಾಟೆ ಮಾಡುವ ಉದ್ದೇಶದಿಂದ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಮೇಲ್ಕಂಡ ಜಮೀನಿನ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.144ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಮೇಲ್ಕಂಡ ಜಮೀನಿನ ಬಳಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನು ಉಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.148ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ಚಾಸಾ.1 ಸುರೇಶ, ಚಾಸಾ.2 ಶಿವಣ್ಣ, ಚಾಸಾ.3 ಶಶಿಧರ, ಚಾಸಾ.4 ಶಶಿಕಲಾ ಮತ್ತು ಚಾಸಾ.5 ಚಂದ್ರು ರವರ ಕುಟುಂಬಕ್ಕೆ ಸೇರಿದ ಸರ್ವೆ ನಂ.04/8ರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.447 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ಸುರೇಶ, ಚಾಸಾ.2 ಶಿವಣ್ಣ, ಚಾಸಾ.3 ಶಶಿಧರ, ಚಾಸಾ.4 ಶಶಿಕಲಾ ಮತ್ತು ಚಾಸಾ.5 ಚಂದ್ರು ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಬೋಳಿ ಮಕ್ಕಳಾ, ಸೂಳೇ ಮಕ್ಕಳಾ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ಸುರೇಶ, ಚಾಸಾ.2 ಶಿವಣ್ಣ, ಚಾಸಾ.3 ಶಶಿಧರ, ಚಾಸಾ.4 ಶಶಿಕಲಾ ಮತ್ತು ಚಾಸಾ.5 ಚಂದ್ರು ರವರಿಗೆ, ಜಮೀನಿನಲ್ಲಿ ತಿರುಗಾಡಲು ದಾರಿ ಬಿಡದೇ ಇದ್ದರೆ ನಿಮ್ಮಗಳನ್ನು ಮುಗಿಸಿ

ಬಿಡುತ್ತೇವೆಂದು ಕೊಲೆ ಮಾಡುವುದಾಗಿ ಪ್ರಾಣಾ ಬೆದರಿಕೆ ಹಾಕಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ಸುರೇಶ ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ನಿಲ್ಲಿಸಿಕೊಂಡು ಅಕ್ರಮ ತಡೆವುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.341 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ನಿಮ್ಮ ಕೈಗಳಿಂದ ಚಾಸಾ.1 ಸುರೇಶ ರವರ ಬಲಭಜುದ ಹಿಂಭಾಗದ ಮೇಲ್ಭಾಗಕ್ಕೆ ಹಾಗೂ ಎಡ ಹೊಟ್ಟೆಯ ಭಾಗಕ್ಕೆ ಹೊಡೆದಿರುತ್ತೀರಿ ಹಾಗೂ 2ನೇ ಆರೋಪಿಯಾದ ನೀವು ನಿಮ್ಮ ಕಾಲುಗಳಿಂದ ಚಾಸಾ.4 ಶಶಿಕಲಾ ರವರ ಹೊಟ್ಟೆಗೆ ಒದ್ದಿರುತ್ತೀರಿ, ಇದರಿಂದ ಚಾಸಾ.1 ಮತ್ತು ಚಾಸಾ.4 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಕೊನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 9ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 1ನೇ ಮತ್ತು 3ನೇ ಆರೋಪಿಯಾದ ನೀವು ದೊಣ್ಣೆಗಳಿಂದ ಚಾಸಾ.5 ಚಂದ್ರು ರವರ ಮೂಗಿಗೆ ಮತ್ತು ತಲೆಯ ಭಾಗಕ್ಕೆ ಹೊಡೆದು ಸಾಮಾನ್ಯ ಮತ್ತು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ.ಕಲಂ.326 ಸಹವಾಚಕ 149ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ: **(ಯೋಗೇಶ.ಎಂ.ಆರ್.)**
ಪಿರಿಯಾಪಟ್ಟಣ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.